ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೃಷಿ ಕಾಯ್ದೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 21/1/21

## 1.5 ವರ್ಷ ಜಾರಿಗೊಳಿಸದಿರಲು ಸಿದ್ಧವೆಂದ ಕೇಂದ್ರ । ಜ.22ಕ್ಕೆ ರೈತರ ನಿರ್ಧಾರ ನಿರೀಕ್ಷೆ

# ಕೃಷಿ ಕಾಯಿದೆ ಬಿಕ್ಕಟ್ಟು ಅಂತ್ಯ?

**ಹೊಸದಿಲ್ಲಿ:** ಮೂರು ನೂತನ ಕೃಷಿ ಕಾಯಿದೆಗಳ ರದ್ದತಿ ವಿಚಾರದಲ್ಲಿ ಕೊನೆಗೂ ಪ್ರತಿಭಟನಾನಿರತ ರೈತರ ಹೋರಾಟಕ್ಕೆ ತಾತ್ಕಾಲಿಕ ಜಯ ಸಿಕ್ಕಿದೆ. ಒಂದೂವರೆ ವರ್ಷಗಳ ಕಾಲ ಕಾಯಿದೆಗಳನ್ನು ಜಾರಿ ಮಾಡುವುದಿಲ್ಲ, ಕನಿಷ್ಠ ಬೆಂಬಲ ಬೆಲೆಗೆ ಖಾತ್ರಿ ಸೇರಿ ರೈತರ ಎಲ್ಲ ಅನುಮಾನಗಳನ್ನು ಪರಿಹರಿಸಲು ಜಂಟಿ ಸಮಿತಿ ರಚಿಸಲಾಗುವುದು ಎಂದು ಕೇಂದ್ರ ಸರಕಾರ ಹೇಳಿದೆ.

ಕೇಂದ್ರದ ಈ ಪ್ರಸ್ತಾವವನ್ನು ರೈತ ಸಂಘಟನೆಗಳು ಆಂತರಿಕ ಸಮಾಲೋಚನೆ ಬಳಿಕ ಸ್ವೀಕರಿಸುವ ಸಾಧ್ಯತೆಗಳಿದ್ದು, ಜನವರಿ 22ರಂದು ನಡೆಯಲಿರುವ ಮತ್ತೊಂದು ಸುತ್ತಿನ ಸಂಧಾನ ಸಭೆಯಲ್ಲಿ ತಮ್ಮ ತೀರ್ಮಾನ ಸ್ಪಷ್ಟಪಡಿಸಲಿವೆ ಎಂದು ಮೂಲಗಳು ಹೇಳಿವೆ. ವಿಜ್ಞಾನ ಭವನದಲ್ಲಿ ರೈತ ಮುಖಂಡರ ಜತೆಗೆ ನಡೆದ ಸಭೆ ಬಳಿಕ ಮಾತನಾಡಿದ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು, ''ಕಾಯಿದೆಗಳ ಕುರಿತ ಬಿಕ್ಕಟ್ಟು ಪರಿಹಾರಕ್ಕೆ ಕೇಂದ್ರ ಮುಂದಾಗಿದೆ. ಇನ್ನೂ 18 ತಿಂಗಳು ಕಾಯಿದೆಗಳನ್ನು ಜಾರಿ ಮಾಡದೇ ಅಮಾನತಿನಲ್ಲಿಡುವ ಪ್ರಸ್ತಾವವನ್ನು ಮುಂದಿಟ್ಟಿದ್ದೇವೆ. ಈ ಸಂಬಂಧ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರವನ್ನೂ ಸಲ್ಲಿಸಲು ಸಿದ್ಧ. ರೈತರು ಒಪ್ಪಿ ಪ್ರತಿಭಟನೆ ಕೈಬಿಡುವ ವಿಶ್ವಾಸವಿದೆ,'' ಎಂದು ಹೇಳಿದರು.



ದಿಲ್ಲಿಯ ಸಿಂಘು ಗಡಿಯಲ್ಲಿ ಪ್ರತಿಭಟನಾನಿರತ ರೈತರು.

**ಸಾಂಕೇತಿಕ ಟ್ರ್ಯಾಕ್ಟರ್ ರ‍್ಯಾಲಿ?:** ಕೇಂದ್ರದ ಈ ಪ್ರಸ್ತಾವದ ಬಳಿಕ ರೈತರು, ಗಣರಾಜ್ಯೋತ್ಸವ ದಿನದಂದು ದಿಲ್ಲಿಯಲ್ಲಿ ನಡೆಸಲು ಉದ್ದೇಶಿಸಿರುವ ಟ್ರ್ಯಾಕ್ಟರ್ ರ‍್ಯಾಲಿಯನ್ನು ಕೈಬಿಟ್ಟು ಸಾಂಕೇತಿಕವಾಗಷ್ಟೇ ರ‍್ಯಾಲಿ ನಡೆಸುವ ಸಾಧ್ಯತೆಗಳಿವೆ ಎನ್ನಲಾಗಿದೆ.

**ಸುಪ್ರೀಂ ಕಿಡಿ:** ಪ್ರತಿಭಟನೆಯ ಬಿಕ್ಕಟ್ಟು ಪರಿಹರಿಸಲು ಸಮಿತಿ ಸದಸ್ಯರ ನೇಮಕ ವಿಚಾರದಲ್ಲಿನ ರೈತರ ಆಕ್ಷೇಪಕ್ಕೆ ಸುಪ್ರೀಂ ಕೋರ್ಟ್ ಕಿಡಿಕಾರಿದೆ. ಸದಸ್ಯರ ಪೂರ್ವಾಪರ ಏನೇ ಇದ್ದರೂ ಅವರಿಗೆ ಕಾಯಿದೆ ಕುರಿತು ನಿರ್ಧಾರ ಕೈಗೊಳ್ಳುವ ಅಧಿಕಾರ ಇಲ್ಲ, ಕೇವಲ ವರದಿ ನೀಡುತ್ತಾರಷ್ಟೆ. ಹೀಗಿರುವಾಗ ಪಕ್ಷಪಾತದ ವಿಷಯ ಎಲ್ಲಿ ಬಂತು ಎಂದು ಸಿಜೆಐ ಎಸ್.ಎ. ಬೊಬ್ಡೆ ನೇತೃತ್ವದ ನ್ಯಾಯಪೀಠ ಪ್ರಶ್ನಿಸಿದೆ.

ಕೃಷಿ ಕಾಯಿದೆಗಳ ಬಿಕ್ಕಟ್ಟು ಬಗೆಹರಿಸಲು ಸುಪ್ರೀಂ ಕೋರ್ಟ್ ರಚಿಸಿದ ನಾಲ್ವರು ತಜ್ಞರ ಸಮಿತಿಯಲ್ಲಿ, ಕೆಲವು ಸದಸ್ಯರು ಈ ಹಿಂದೆ ಕಾಯಿದೆಗಳ ಪರ ಒಲವು ವ್ಯಕ್ತಪಡಿಸಿದ್ದಾರೆಂದು ಕೆಲವು ರೈತ ಸಂಘಟನೆಗಳು ತಕರಾರು ತೆಗೆದಿದ್ದವು.